**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಓ ಎಸ್ ನಂ. 48 / 2017**

| | | |
|---|---|---|
| ಸಾಕ್ಷಿಯ ಹೆಸರು | : ಜಡೇಸ್ವಾಮಿ | |
| ತಂದೆಯ ಹೆಸರು | : ಸಿದ್ದಯ್ಯ | |
| ವಯಸ್ಸು | : 57 ವರ್ಷ | |
| ಉದ್ಯೋಗ | : ಪತ್ರ ಬರಹಗಾರ | ಡಿಡಬ್ಲ್ಯೂ -3 |
| ವಾಸ ಸ್ಥಳ | : ಬಿ. ಗುಂಡಾಪುರ ಗ್ರಾಮ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕ: 21.07.2025**

**ಮುಖ್ಯ ವಿಚಾರಣೆ - ಪ್ರತಿವಾದಿ ಪರ ವಕೀಲರಿಂದ**

ದಿನಾಂಕಃ 18.06.2014 ರ ವಿಲ್ ಯಾನೆ ಮರಣ ಶಾಸನ ಪತ್ರವನ್ನು ಮತ್ತು ಅದೇ ದಿನ ದಾನ ಪತ್ರವನ್ನು ಕೂಡ ಬರೆದಿರುತ್ತೇನೆ. ಎರಡು ದಾಖಲೆಗಳು ಹನೂರು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ. ಚಾಮಯ್ಯರವರು ಎರಡು ದಾಖಲೆಗಳನ್ನು ಮಾಡಲು ದಾಖಲಾತಿ ಮತ್ತು ಮಾಹಿತಿಯನ್ನು ನೀಡಿರುತ್ತಾರೆ. ನಿಡಿ-40 ವಿಲ್ ನಾಮೆಗೆ ಎಂ. ಚಾಮಯ್ಯರವರು ಮತ್ತು ಸಾಕ್ಷಿಯಾಗಿ ಉದಯಕುಮಾರ್ ಮತ್ತು ರಾಜುರವರು ಸಹಿ ಮಾಡಿರುತ್ತಾರೆ. ನಿಡಿ-41 ದಾನ ಪತ್ರಕ್ಕೆ ಚಾಮಯ್ಯ ಮತ್ತು ಅವರ ಮಗಳು ಜಯಮ್ಮ ಸಹಿ ಮಾಡಿರುತ್ತಾರೆ. ಸಾಕ್ಷಿಯಾಗಿ ಸಿ. ರಾಜು, ಹೆಚ್.ಸಿ. ನಿಂಗರಾಜು, ಉದಯಕುಮಾರ್ ರವರು ಸಹಿ ಮಾಡಿರುತ್ತಾರೆ. ಸದರಿಯವರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-40(ಎ) ಮತ್ತು ನಿಡಿ-41(ಎ) ಎಂದು ಗುರುತಿಸಲಾಯಿತು. ನಿಡಿ-40 ಮತ್ತು ನಿಡಿ-41ನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ.

**ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.